# 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ.837/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಸಂಧ್ಯ | ಚಾಸಾ- 19 |
| ಗಂಡನ **ಹೆಸರು** | ಃ | ರವಿ | ಪ್ರಾಸಾ- 5 |
| **ವಯಸ್ಸು** | ಃ | 44 ವರ್ಷ | |
| **ಉದ್ಯೋಗ** | ಃ | WHC ಸಂಚಾರಿ ವಿಭಾಗ | ಪ್ರಮಾಣ ವಚನ ಬೋಧಿಸಲಾಯಿತು |
| **ವಾಸ** | ಃ | ಚನ್ನರಾಯಪಟ್ಟಣ ಟೌನ್ | ದಿನಾಂಕಃ 07.08.2026 |

## ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ

ನಾನು ಕಳೆದ **2018** ರಿಂದ **2022**ವರಿಗೂ ಚನ್ನರಾಯಪಟ್ಟಣ ಸಂಚಾರಿ ಪೋಲಿಸ್ ಠಾಣೆಯಲ್ಲಿ **WHC** ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ **09.04.2022** ರಂದು ನಾನು ಹಗಲು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸ**-1**ರವರು ರಾತ್ರಿ **9.00** ಗಂಟೆಯ ಸಮಯಕ್ಕೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಪ್ರ.ವ.ವರದಿಯನ್ನು ದಾಖಲಿಸಿ, ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ.ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ**-21**ರವರಿಗೆ ನೀಡಿರುತ್ತೇನೆ.

ದೂರನ್ನು ಈಗಾಗಲೇ ನಿಪಿ**-1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-1**(ಬಿ) ಎಂದು ಗುರುತಿಸಲಾಯಿತು. ನಾನು ದಾಖಲಿಸಿದ ಪ್ರ.ವ.ವರದಿಯನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಪ್ರ.ವ.ವರದಿಯನ್ನು ನಿಪಿ**-5** ಎಂದು, ಸಾಕ್ಷಿಯ ಸಹಿಯನ್ನು ನಿಪಿ**-5**(ಎ) ಎಂದು ಗುರುತಿಸಲಾಯಿತು.

## ಪಾಟೀ ಸವಾಲು ಃ- ಆರೋಪಿ ಪರ ವಕೀಲರಿಂದ

ಚಾಸಾ**-1**ರವರು ನೀಡಿದ ಸುಳ್ಳು ದೂರಿನ ಮೇಲೆ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ**-1, 5** ನ್ನು ಈ ಪ್ರಕರಣಕ್ಕೆ ಎಂದು ಸೃಷ್ಟಿಸಿಕೊಂಡು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ